<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು .</u>

**<u>SC. No. 145/2022</u>**

<u>ದಿನಾಂಕ **: 23.06.2026.**</u>

ಕರ್ನಾಟಕ ಸರ್ಕಾರದ ಪರವಾಗಿ
ತಲಘಟ್ಟಪುರ ಪೊಲೀಸ್ ಠಾಣೆ.

**: ಪಿರ್ಯಾದುದಾರರು.**

<u>ವಿರುದ್ಧ</u>

**A1** ರಿಯಾಜ್ ಪಾಷ ಬಿನ್ ಹುಸೇನ್ ಸಾಬ್, 43 ವರ್ಷ, ವಾಸಃ ಮನೆ ನಂ. 288, ಜೆ.ಪಿ. ನಗರ 9 ನೇ ಫೇಸ್, ಆವಲಹಳ್ಳಿ, ಅಂಜನಪುರ ಅಂಚೆ, ಬೆಂಗಳೂರು.

**A2** ಇಮ್ರಾನ್ @ ಚಿನ್ನುಬಾ (ಮೃತ)

**A3** ಮಹಮ್ಮದ್ ಅಶ್ರಫ್ @ ಗಬ್ಬರ್ ಬಿನ್ ಮಹಮ್ಮದ್ ಆರೀಫ್, 27 ವರ್ಷ, ವಾಸಃ ಆವಲಹಳ್ಳಿ, ಬಿಡಿಎ ಕ್ವಾಟ್ರಸ್, ಜೆ.ಪಿ. ನಗರ 9 ನೇ ಹಂತ, ಆವಲಹಳ್ಳಿ, ಅಂಜನಪುರ ಅಂಚೆ, ಬೆಂಗಳೂರು.

**A4** ಸಯ್ಯದ್ ನದೀಮ್ ಬಿನ್ ನಜೀರ್ ಅಹಮ್ಮದ್, 31 ವರ್ಷ, ವಾಸಃ ನಂ. 789, 6 ನೇ ಕ್ರಾಸ್, ಗುರುಕುಲ ಸ್ಕೂಲ್ ಮುಂಭಾಗ, ಆವಲಹಳ್ಳಿ, ಅಂಜನಪುರ ಅಂಚೆ, ಬೆಂಗಳೂರು.

**A5** ನಯೀಂ ಇರ್ಫಾನ್ ವಾಸಃ ಬೆಂಗಳೂರು.

**: ಆರೋಪಿತರು.**

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರ ಅನ್ವಯ ಆರೋಪಿಯ ಹೇಳಿಕೆ **: -**</u>

<u>ಪ್ರಶ್ನೆ **: 1-**</u> ಈ ಪ್ರಕರಣದಲ್ಲಿ ಸಾಕ್ಷಿ ನುಡಿದಿರುವ ಎಲ್ಲಾ ಸಾಕ್ಷಿದಾರರ ಸಾಕ್ಷಿ ಹೇಳಿಕೆಗಳನ್ನು ಕೇಳಿ ಅರ್ಥೈಸಿಕೊಂಡಿರುತ್ತೀರೋ?

<u>ಉತ್ತರಃ -</u> ಎ1

ಎ3

ಎ4

ಎ5

ಪ್ರಶ್ನೆ **: 2** ಫ್ರಾಸಾ-1/ ಪುಟ್ಟೇಗೌಡ ಎಸ್ ಎನ್ ರವರು ಸಾಕ್ಷಿ ನುಡಿಯುತ್ತಾ ದಿನಾಂಕ 11.06.2022 ರಂದು ರಾತ್ರಿ 10:30 ಗಂಟೆಗೆ, ಸಿಸಿಬಿ ಪೊಲೀಸ್ ಇನ್‌ಸ್ಪೆಕ್ಟರ್ ಆಗಿದ್ದ ಚಾಸಾ.1/ ತನ್ವೀರ್ ರವರು ಲಿಖಿತ ವರದಿ ಸಹಿತ ದೂರನ್ನು, ಪಂಚನಾಮೆ ಮತ್ತು ನಾಲ್ಕು ಜಪ್ತಿ ಮಾಡಿದ ಮಾಲುಗಳೊಂದಿಗೆ ಹಾಜರುಪಡಿಸಿದ್ದು, ಅವರು ಅವುಗಳನ್ನು ಸ್ವೀಕರಿಸಿ, Cr.No. 139/2022 ರಲ್ಲಿ ದೂರನ್ನು ದಾಖಲಿಸಿ, ಪ್ರಥಮ ಮಾಹಿತಿ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದು, ನಂತರ, ಪಂಚರಾದ ಚಾಸಾ.2, 3, ರಫಿ ಮತ್ತು ಸಿಬ್ಬಂದಿಯಾದ ಚಾಸಾ.4 ರಿಂದ ಚಾಸಾ.8 ರವರ ಹೇಳಿಕೆಗಳನ್ನೂ ದಾಖಲಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

<u>ಉತ್ತರಃ -</u> ಎ1

ಎ3

ಎ4

ಎ5

ಪ್ರಶ್ನೆ **: 3** ಫ್ರಾಸಾ-1/ ಪುಟ್ಟೇಗೌಡ ಎಸ್ ಎನ್ ರವರು ಮುಂದುವರಿದು ಸಾಕ್ಷಿ ನುಡಿಯುತ್ತಾ ನಂತರ, 1, 3 ಮತ್ತು 4 ನೇ ಆರೋಪಿತರಾದ ನಿಮ್ಮನ್ನು ಮತ್ತು ಮೃತ 2 ನೇ ಆರೋಪಿಯನ್ನು ಕಾನೂನಿನ ಪ್ರಕಾರ ಬಂಧಿಸಿದ್ದು, ನಂತರ 1, 3

ಮತ್ತು 4 ನೇ ಆರೋಪಿತರಾದ ನಿಮ್ಮ ಹಾಗೂ ಮೃತ 2 ನೇ ಆರೋಪಿಯ ಸ್ವ-ಇಚ್ಛಾ ಹೇಳಿಕೆಗಳನ್ನು ದಾಖಲಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

<u>ಉತ್ತರಃ -</u> ಎ1

ಎ3

ಎ4

ಎ5

ಪ್ರಶ್ನೆ **: 4** ಫ್ರಾಸಾ-1/ ಪುಟ್ಟೇಗೌಡ ಎಸ್ ಎನ್ ರವರು ಮುಂದುವರಿದು ಸಾಕ್ಷಿ ನುಡಿಯುತ್ತಾ ದಿನಾಂಕ 12.06.2022 ರಂದು, ಅವರು 1, 3 ಮತ್ತು 4 ನೇ ಆರೋಪಿತರಾದ ನಿಮ್ಮನ್ನು ಹಾಗೂ ಮೃತ 2 ನೇ ಆರೋಪಿ ರವರನ್ನು ವಿಚಾರಣೆ ನಡೆಸಿ, ನಂತರ ಸಿಬ್ಬಂದಿ ಮೂಲಕ ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

<u>ಉತ್ತರಃ -</u> ಎ1

ಎ3

ಎ4

ಎ5

ಪ್ರಶ್ನೆ **: 5** ಫ್ರಾಸಾ-2/ ಕೆ ಎಸ್ ತನ್ವೀರ್ ರವರು ಸಾಕ್ಷಿ ನುಡಿಯುತ್ತಾ ದಿನಾಂಕ 11.06.2022 ರಂದು ಅವರು CCB ಯಲ್ಲಿ ಕರ್ತ್ಯವದಲ್ಲಿ ಇದ್ದಾಗ ಸಂಜೆ 6.00 ಗಂಟೆಗೆ ಬಾತ್ಮಿದಾರರು ಕರೆ ಮಾಡಿದ್ದು ನಂತರ ಸಂಜೆ 6.30 ಕ್ಕೆ ಅವರು ಪಂಚರಾದ ಚಾಸಾ. 2 ಮತ್ತು 3 ರವರನ್ನು ಬರಮಾಡಿಕೊಂಡು ಬಾತ್ಮಿ ವಿಚಾರ ತಿಳಿಸಿದ್ದು, ಸಂಜೆ 7.00 ಕ್ಕೆ CCB ಕಛೇರಿಯನ್ನು ದ್ವಿಚಕ್ರ ವಾಹನ ಹಾಗೂ ಸರ್ಕಾರಿ ವಾಹನಗಳಲ್ಲಿ

ಸಿಬ್ಬಂದಿಗಳಾದ ಗಣೇಶ್ ರಾವ್, ಉಲ್ಫತ್ ಖಾನ್, ಶ್ರೀನಿವಾಸ್ ಮೂರ್ತಿ, ಮಂಜು ಕುಮಾರ್ ಹಾಗೂ ಪಂಚರ ಜೊತೆ ಆವಲಹಳ್ಳಿಯಲ್ಲಿ ಎಂ.ಆರ್.ಪಿ.ಎಲ್. ಪೆಟ್ರೋಲ್ ಬಂಕ್ ಬಳಿ ಬಂದಿದ್ದು, ಬಾತ್ಮಿದಾರರನ್ನು ಸಂಪರ್ಕಿಸಿ ಅವರುಗಳ ಪರಸ್ಪರ ಅಂಗ ಶೋಧನೆ ಮಾಡಿಕೊಂಡರು ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

<u>ಉತ್ತರಃ -</u> ಎ1

ಎ3

ಎ4

ಎ5

ಪ್ರಶ್ನೆ : **6** ಫ್ರಾಸಾ-2/ ಕೆ ಎಸ್ ತನ್ವೀರ್ ರವರು ಮುಂದುವರಿದು ಸಾಕ್ಷಿ ನುಡಿಯುತ್ತಾ ನಂತರ ಬಾತ್ಮಿದಾರರು ತೋರಿಸಿದ ಸ್ಥಳದಲ್ಲಿ ನೋಡಲಾಗಿ 25 - 35 ವಯೋಮಾನದ 4 - 5 ಜನರು ತಮ್ಮ ಕೈಗಳಲ್ಲಿ ಮಾರಾಕಾಸ್ತ್ರಗಳನ್ನು ಹಿಡಿದುಕೊಂಡು ಅಪರಾಧಿಕ ಸಂಚು ಮಾಡುತ್ತಿರುವುದು ಕಂಡು ಬಂದಿದ್ದು, ನಂತರ ಅವರು ಮತ್ತು ಸಿಬ್ಬಂದಿಗಳು ರಾತ್ರಿ 8.15 ಕ್ಕೆ ಆ ವ್ಯಕ್ತಿಗಳನ್ನು ಸುತ್ತುವರಿದು ಹಿಡಿದಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

<u>ಉತ್ತರಃ -</u> ಎ1

ಎ3

ಎ4

ಎ5

ಪ್ರಶ್ನೆ : **7** ಫ್ರಾಸಾ-2/ ಕೆ ಎಸ್ ತನ್ವೀರ್ ರವರು ಮುಂದುವರಿದು ಸಾಕ್ಷಿ ನುಡಿಯುತ್ತಾ ಅದರಲ್ಲಿ 4 ಜನರು ಸಿಕ್ಕಿದ್ದು ಹೆಸರು ವಿಳಾಸ ಕೇಳಲಾಗಿ 1 ನೇ

ಆರೋಪಿ ರಿಯಾಜ್ ಆದ ನಿನ್ನ ಬಳಿ 22 ಇಂಚು ಉದ್ದದ ಮರದ ಹಿಡಿಕೆ ಇದ್ದ ಲಾಂಗ್, ಮೃತ 2 ನೇ ಆರೋಪಿ ಇಮ್ರಾನ್ ಬಳಿ ಒಂದು ಲಾಂಗ್ ಇದ್ದು, 3 ನೇ ಆರೋಪಿ ಮೊಹಮ್ಮದ್ ಅಶ್ರಫ್ ಆದ ನಿನ್ನ ಕೈಯಲ್ಲಿ ಕಬ್ಬಿಣದ ಪೈಪ್ ಇದ್ದು, 4 ನೇ ಆರೋಪಿ ಸೈಯದ್ ನದೀಮ್ ಆದ ನಿನ್ನ ಕೈಯಲ್ಲಿ ಖಾರದ ಪುಡಿ ಪೊಟ್ಟಣ ಇದ್ದು, ಆ ದಿನ 5 ನೇ ಆರೋಪಿ ಸೈಯದ್ ನಹೀಮ್ ಆದ ನೀನು ಓಡಿಹೋಗಿದ್ದು, ಎಲ್ಲಾ ವಸ್ತುಗಳನ್ನು ಪಂಚನಾಮೆ ಮೂಲಕ ಜಪ್ತಿ ಮಾಡಿ ತಲಘಟ್ಟಪುರ ಠಾಣೆಗೆ ರಾತ್ರಿ 10.30 ಕ್ಕೆ ವಾಪಸ್ಸು ಬಂದು ವರದಿ ತಯಾರು ಮಾಡಿ ಠಾಣಾಧಿಕಾರಿಗೆ ನೀಡಿದ್ದೇನೆ ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

<u>ಉತ್ತರಃ -</u> ಎ 1

ಎ3

ಎ4

ಎ5

ಪ್ರಶ್ನೆ : **8** ಫ್ರಾಸಾ-3/ ಗಣೇಶ್ ರವರು ಸಾಕ್ಷಿ ನುಡಿಯುತ್ತಾ ದಿನಾಂಕ 11.06.2022 ರಂದು ಅವರು CCB ಕಛೇರಿಯಲ್ಲಿ ಇರುವಾಗ ಸಂಜೆ 6.15 ಗಂಟೆಗೆ ಪಿ.ಐ. ರವರು ಅವರಿಗೆ, ಚಾಸಾ. 4, 6 ರಿಂದ 8 ರವರಿಗೆ ಆವಲಹಳ್ಳಿಯಲ್ಲಿ ಎಂ.ಆರ್.ಪಿ.ಎಲ್. ಪೆಟ್ರೋಲ್ ಬಂಕ್ ಬಳಿ ಬಂದಿದ್ದು ಯಾರೋ 4 – 5 ಆಸಾಮಿಗಳು ತಮ್ಮ ಕೈಗಳಲ್ಲಿ ಲಾಂಗ್ ಮತ್ತು ಕಬ್ಬಿಣದ ಪೈಪ್ ಗಳನ್ನು ಹಿಡಿದುಕೊಂಡು ಅಪರಾಧ ಕೃತ್ಯ ಎಸಗಲು ಹೊಂಚು ಹಾಕುತಿದ್ದಾರೆ ಎಂದು ತಿಳಿಸಿದ್ದು, ನಂತರ ಅವರು ಚಾಸಾ. 2 ಮತ್ತು 3 ರವರನ್ನು ಕರೆದುಕೊಂಡು ಬಂದು ಪಿ.ಐ. ರವರ ಮುಂದೆ ಹಾಜರು ಪಡಿಸಿರುವುದಾಗಿ ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

<u>ಉತ್ತರಃ -</u> ಎ1

ಎ3

ಎ4

ಎ5

ಪ್ರಶ್ನೆ : **9** ಫ್ರಾಸಾ-3/ ಗಣೇಶ್ ರವರು ಮುಂದುವರಿದು ಸಾಕ್ಷಿ ನುಡಿಯುತ್ತಾ ಪಿ.ಐ. ರವರು ಚಾಸಾ. 2 ಮತ್ತು 3 ರವರಿಗೆ ಬಾತ್ಮಿ ವಿಚಾರ ತಿಳಿಸಿದ್ದು, ನಂತರ ಅವರು, ಪಿ.ಐ., ಸಿಬ್ಬಂದಿಗಳು ಹಾಗೂ ಪಂಚರು ಪರಸ್ಪರ ಅಂಗಶೋಧನೆ ಮಾಡಿಕೊಂಡು ಸಂಜೆ 7.00 ಕ್ಕೆ CCB ಕಛೇರಿಯನ್ನು ದ್ವಿಚಕ್ರ ವಾಹನ ಹಾಗೂ ಸರ್ಕಾರಿ ವಾಹನಗಳಲ್ಲಿ ಆವಲಹಳ್ಳಿಯಲ್ಲಿ ಎಂ.ಆರ್.ಪಿ.ಎಲ್. ಪೆಟ್ರೋಲ್ ಬಂಕ್ ಬಳಿ ಬಂದಿದ್ದು, ಸ್ವಲ್ಪ ದೂರದಲ್ಲಿ ವಾಹನವನ್ನು ನಿಲ್ಲಿಸಿ ನೋಡಲಾಗಿ ಬಾತ್ಮಿದಾರರು ತೋರಿಸಿದ ಸ್ಥಳದಲ್ಲಿ 4 – 5 ಜನರು ತಮ್ಮ ಕೈಗಳಲ್ಲಿ ಮಾರಾಕಾಸ್ತ್ರಗಳನ್ನು ಹಿಡಿದುಕೊಂಡು ಅಪರಾಧಿಕ ಸಂಚು ಮಾಡುತ್ತಿದ್ದು ಕಂಡು ಬಂತು ಎಂದು ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

<u>ಉತ್ತರಃ -</u> ಎ1

ಎ3

ಎ4

ಎ5

ಪ್ರಶ್ನೆ : **10** ಫ್ರಾಸಾ-3/ ಗಣೇಶ್ ರವರು ಮುಂದುವರಿದು ಸಾಕ್ಷಿ ನುಡಿಯುತ್ತಾ ನಂತರ ಪಿ.ಐ. ರವರು ಅವರನ್ನು ಸದರಿ ವ್ಯಕ್ತಿಗಳನ್ನು ಸುತ್ತುವರಿದು ಹಿಡಿದುಕೊಳ್ಳಲು ಸೂಚಿಸಿದ್ದು ಅದರಂತೆ ಅವರು ಸುತ್ತುವರಿದು ಹಿಡಿದಿದ್ದು ಅವರು 3 ನೇ ಆರೋಪಿಯಾದ ನಿನ್ನನ್ನು ಹಿಡಿದುಕೊಂಡಿದ್ದು ನಿನ್ನ ಕೈಯಲ್ಲಿ ಕಬ್ಬಿಣದ ಪೈಪ್ ಇದ್ದು, ಅವರ ಸಿಬ್ಬಂದಿ ಉಲ್ಫತ್ ಖಾನ್ ರವರು ಮೃತ 2 ನೇ ಆರೋಪಿಯಾದ ಇಮ್ರಾನ್ ನನ್ನು ಹಿಡಿದುಕೊಂಡಿದ್ದು ಆತನ ಬಳಿ ಒಂದು ಲಾಂಗ್ ಇದ್ದು, ಪಿ.ಐ. ರವರು

1 ನೇ ಆರೋಪಿಯಾದ ರಿಯಾಜ್ ನಿನ್ನನ್ನು ಹಿಡಿದುಕೊಂಡಿದ್ದು ನಿನ್ನ ಬಳಿ 22 ಇಂಚು ಉದ್ದದ ಮರದ ಹಿಡಿಕೆ ಇದ್ದ ಲಾಂಗ್ ಇದ್ದು, ಮಂಜು ಕುಮಾರ್ ರವರು 4 ನೇ ಆರೋಪಿಯಾದ ಸೈಯದ್ ನದೀಮ್ ನಿನ್ನನ್ನು ಹಿಡಿದುಕೊಂಡಿದ್ದು ನಿನ್ನ ಕೈಯಲ್ಲಿ ಖಾರದ ಪುಡಿ ಪೊಟ್ಟಣ ಇತ್ತು ಎಂದು ಹಾಗೂ 5 ನೇ ಆರೋಪಿಯಾದ ನಹೀಮ್ @ ಇರ್ಫಾನ್ ಆದ ನೀನು ಆ ದಿನ ಓಡಿ ಹೋಗಿದ್ದೆ ಎಂದು ಹಾಗೂ ತಲಘಟ್ಟಪುರ ಠಾಣೆಗೆ ರಾತ್ರಿ 10.30 ಕ್ಕೆ ವಾಪಸ್ಸು ಬಂದು ಪಿ.ಐ.ರವರು ಠಾಣಾಧಿಕಾರಿಗೆ ವರದಿಯನ್ನು ನೀಡಿದ್ದರು ಎಂದು  ಸಾಕ್ಷಿ ನುಡಿದಿರುತ್ತಾರೆ, ಈ ವಿಚಾರದಲ್ಲಿ ನೀವೇನಾದರೂ ಹೇಳಲು ಬಯಸುತ್ತೀರೋ?

<u>ಉತ್ತರಃ -</u> ಎ 1

ಎ 3

ಎ 4

ಎ 5

<u>ಪ್ರಶ್ನೆ **: 11 -**</u> ನೀವು ಏನಾದರು ಹೇಳುವುದು ಇದೆಯಾ ?

<u>ಉತ್ತರಃ -</u> ಎ 1

ಎ 3

ಎ 4

ಎ 5

<u>ಪ್ರಶ್ನೆ **: 12 -**</u> ನಿಮ್ಮ ಪರ ಯಾರಾದರೂ ಸಾಕ್ಷಿಗಳನ್ನು ವಿಚಾರಣೆ ಮಾಡುವಿರಾ ?

<u>ಉತ್ತರಃ -</u> ಎ 1

ಎ 3

ಎ 4

ಎ5

(ಆರೋಪಿತರ ಹೇಳಿಕೆಗಳನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ಅರ್ಥವಾಗುವಂತೆ ವಿವರಿಸಿ ಓದಿ ಹೇಳಿದಾಗ ಅವರು ನೀಡಿರುವ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿರುತ್ತೇನೆ ಎಂದು ಈ ಮೂಲಕ ಧೃಢೀಕರಿಸುತ್ತಿದ್ದೇನೆ)

**(ಬಿ.ಎಸ್. ರೇಖಾ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

1 ನೇ ಆರೋಪಿಯ ಸಹಿ. 4 ನೇ ಆರೋಪಿಯ ಸಹಿ.

3 ನೇ ಆರೋಪಿಯ ಸಹಿ. 5 ನೇ ಆರೋಪಿಯ ಸಹಿ.